ಸರ್ಕಾರಿ ಆಸ್ಪತ್ರೆ, ಉಡುಪಿಗೆ ಆಂಬ್ಯುಲೆನ್ಸ್ ಒದಗಿಸುವುದು.

೧೩೮೬. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಸರ್ಕಾರಿ ಆಸ್ಪತ್ರೆ, ಉಡುಪಿಯು ಪೆಟ್ರೋಲ್ ಎಂಜಿನ್ ಹೊಂದಿರುವ ಉಪಯುಕ್ತವಲ್ಲದ ಆಂಬ್ಯುಲೆನ್ಸನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯಂ, ಬೆಂಗಳೂರು ಇದಕ್ಕೆ ವಾಪಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಹಾಗಿದ್ದರೆ, ಡೀಸಲ್ ಎಂಜಿನ್ ಹೊಂದಿರುವ ಹೊಸ ವ್ಯಾನ್ ಸರಬರಾಜು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ.

೩) ಸರ್ಕಾರಿ ಆಸ್ಪತ್ರೆ, ಉಡುಪಿಯಲ್ಲಿ ದಂತ ಶಸ್ತ್ರ ಚಿಕಿತ್ಸಕರ ಮತ್ತು ಇ.ಎನ್.ಟಿ. ತಜ್ಞರ ಹುದ್ದೆಗಳು ಖಾಲಿ ಇರುವುದು ಸರ್ಕಾರಕ್ಕೆ ತಿಳಿದಿದೆಯೇ ?

೪) ಹಾಗಿದ್ದರೆ, ಇಬ್ಬರು ತಜ್ಞರನ್ನು ನೇಮಕಾಯಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧) ಬಂದಿದೆ.

೨) ಇಲಾಖೆಯಲ್ಲಿ ಹೊಸ ವಾಹನಗಳನ್ನು ಖರೀದಿಸಿದಾಗ ಈ ಆಸ್ಪತ್ರೆಗೆ ಒಂದು ಡೀಜಲ್ ಆಂಬ್ಯುಲೆನ್ಸ್ ವಾಹನವನ್ನು ಒದಗಿಸಲಂ ಕ್ರಮ ಕೈಗೊಳ್ಳಲಾಗುವುದು.

೩) ೧. ಸಹಾಯಕ ದಂತ ಚಿಕಿತ್ಸಕರ ಹುದ್ದೆ ಖಾಲಿ ಇರುತ್ತದೆ.

೨. ಇ.ಎನ್.ಟಿ. ತಜ್ಞರ ಹುದ್ದೆಯನ್ನು ಮಂಜೂರು ಮಾಡಿರುವುದಿಲ್ಲ.

೪) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಉಡುಪಿಯಲ್ಲಿ ಪೋಲೀಸ್ ಕಛೇರಿಗಳ ಸಂಕೀರ್ಣ

೧೪೪೯. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಉಡುಪಿಯಲ್ಲಿ ಪೋಲೀಸ್ ಕಛೇರಿಗಳ ಸಂಕೀರ್ಣವನ್ನು ಕಟ್ಟುವ ಪ್ರಸ್ತಾವನೆಯಾದರೂ ಇದೆಯೇ ?

೨) ಈಗ ಪೋಲೀಸ್ ಠಾಣೆಯು ನಡೆಯುತ್ತಿರುವ ಕಟ್ಟಡದ ಮಾಲೀಕರು ಎವಿಕ್ಷನ್ ನೋಟೀಸು ಕೊಟ್ಟಿರುವುದು ನಿಜವೇ ?

೩) ಹಾಗಿದ್ದಲ್ಲಿ ಈ ವಿಚಾರದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

೧) ಇಲ್ಲ.

೨) ನಿಜ. ಸಿವಿಲ್ ದಾವೆಯೊಂದಿಯು ನ್ಯಾಯಾಲಯದಲ್ಲಿ ಬಾಕಿ ಇದೆ.

೩) ನ್ಯಾಯಾಲಯದ ತೀರ್ಮಾನವನ್ನು ಕಾಯಲಾಗುವುದು.